ಬೆಂಗಳೂರು ನಗರದಲ್ಲಿ ಡಾ. ಅಂಬೇಡ್ಕರ್ ಭವನ

45 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಡಾ// ಅಂಬೇಡ್ಕರ್ ಭವನ ಕಟ್ಟುತ್ತೇವೆಂದು ಸರ್ಕಾರದವರು ಘೋಷಿಸಿದ್ದು ಯಾವಾಗ?

ಆ) ಅದಕ್ಕೆ ಸಂಬಂಧಪಟ್ಟ ನಿರ್ದೇಶನ ನಕ್ಷೆಗಳು ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ ಅದರ ವಿವರಗಳೇನು ಹಾಗೂ ತಗಲುವ ಅಂದಾಜು ವೆಚ್ಚವೆಷ್ಟು?

ಈ) ಈ ಕಟ್ಟಡವನ್ನು ಎಂದಿಗೆ ಮುಗಿಸಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ದಿನಾಂಕ 22-6-86

ಆ) ಹೌದು.

ಇ) ಸದರಿ ಭವನ ಎರಡು ನೆಲಮಾಳಿಗೆಗಳು ಹೊಂದಿದ್ದು, ಮೊದಲನೆಯ ನೆಲಮಾಳಿಗೆಯಲ್ಲಿ ಉಪಹಾರ ಮಂದಿರ, ಮತ್ತು ಉಗ್ರಾಣ ಹೊಂದಿರುತ್ತದೆ. ಎರಡನೆಯ ನೆಲಮಾಳಿಗೆಯಲ್ಲಿ ಗ್ರಂಥಾಲಯ, ಮ್ಯೂಜಿಯಂ, ಪ್ರಾರ್ಥನಾ ಮಂದಿರ ಹೊಂದಿರುತ್ತದೆ. ನೆಲ ಅಂತಸ್ಥಿನಲ್ಲಿ ಮತ್ತು ಬಾಲ್ಕನಿಯಲ್ಲಿ ಒಟ್ಟು 1175 ಆಸನಗಳುಳ್ಳ ಸಭಾಭವನ ಹಾಗೂ ಅದಕ್ಕೆ ಸಂಬಂಧಪಟ್ಟ ವ್ಯವಸ್ಥೆಗಳಿವೆ. ಇವುಗಳೆಲ್ಲದರ ಪೂರ್ಣ ಅಂದಾಜು ವೆಚ್ಚ 650-00 ಲಕ್ಷ ರೂಪಾಯಿಗಳು.

ಈ) ಕಟ್ಟಡದ ನಿರ್ಮಾಣವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು. ಪ್ರಥಮ ಹಂತದಲ್ಲಿ ನೆಲಮಾಳಿಗೆ ಕಾಮಗಾರಿಗಳಿಗೆ 160ಲಕ್ಷ ರೂ.ಗಳ ಅಂದಾಜಿನಲ್ಲಿ ಗುತ್ತಿಗೆಗಳು ಸ್ವೀಕೃತವಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಇದು ಮಳೆಗಾಲವನ್ನು ಬಿಟ್ಟು 18 ತಿಂಗಳಲ್ಲಿ ಪೂರ್ಣವಾಗುವುದು. ಅನುದಾನದ ಲಭ್ಯತೆಯನ್ನು ಅನುಸರಿಸಿ, ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

ಶ್ರೀ ಎಂ.ವಿ. ವೆಂಕಟಪ್ಪ : ಈಗ ಅಂಬೇಡ್ಕರ್ ಭವನದ ಫೌಂಡೇಷನ್ ಸ್ಟೋನ್ ಏನಾದರೂ ಹಾಕಿದ್ದೀರಾ? ಇಲ್ಲದೆ ಇದ್ದರೆ ತಾವು ಏಪ್ರಿಲ್ 14ರ ಒಳಗೆ ಅಂದರೆ ಅಂಬೇಡ್ಕರ್‌ರವರ ಬರ್ತಡೇ ಒಳಗೆ ಅದನ್ನು ಹಾಕುವುದಕ್ಕೆ ಪ್ರಯತ್ನ ಪಡುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಈಗ ಆ ಕಾರ್ಯವನ್ನು ಮಾಡಬೇಕು ಎಂದು ಹೇಳಿ ಟೆಂಡರ್ ಕರೆಯಲಾಗಿದೆ. ಟೆಂಡರನ್ನು ಒಪ್ಪಿಕೊಂಡು ಕಾರ್ಯ ಪ್ರಾರಂಭ ಮಾಡಬೇಕಾಗುತ್ತದೆ. ಈ ಮಧ್ಯೆ ಅದಕ್ಕೆ ಫೌಂಡೇಶನ್ ಹಾಕುವುದಕ್ಕೆ ಕೂಡ ಕೆಲಸ ಪ್ರಾರಂಭ ಮಾಡಬೇಕು ಎಂದು ಹೇಳಿ ವಿಚಾರ ಮಾಡುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಅಂಬೇಡ್ಕರ್ ಅವರ ಸಾಹಿತ್ಯ ಅಂದರೆ ಅವರ ಬಗ್ಗೆ ಬರವಣಿಗೆಗಳ ಏನೇನು ಇವೆ, ಅವುಗಳೆಲ್ಲವನ್ನೂ ಕ್ರೋಢೀಕರಿಸಿ, ಅಂಬೇಡ್ಕರ್ ಭವನದಲ್ಲಿ ಒಂದು ದೊಡ್ಡದಾಗಿ ಲೈಬ್ರರಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಹೆಚ್. ರಂಗನಾಥ್ : ನನಗೆ ಭವನ ಕಟ್ಟಿಸುವ ಕೆಲಸ ಅಷ್ಟೆ ಇರುವುದು. ಬಾಕಿದೆಲ್ಲಾ ನನಗೆ ಸಂಬಂಧಪಟ್ಟಿದ್ದು ಅಲ್ಲ.

ಶ್ರೀ ಬಾಬುರಾವ್ ಚವಾಣ್ : ಈ ಪ್ರಶ್ನೆಯನ್ನು ಹೋದ ಸಲ ನಾವು ಸನ್ಮಾನ್ಯ ಸಭಾದ್ಯಕ್ಷರಿಗೆ ಕೇಳಿದ್ದೆವು. ಅಂಬೇಡ್ಕರ್ ಭವನದ ಬಗ್ಗೆ ಬಹಳ ಡಿಲೆ ಆಗುತ್ತಾ ಇದೆ. ಅದಕ್ಕೆ ಮಾನ್ಯ ಮಂತ್ರಿಗಳನ್ನು ನಾನು ಕೇಳುತ್ತಾ ಇದ್ದೇನೆ. ಅದಕ್ಕೆ ತೀವ್ರ ಗತಿಯಿಂದ ಕೆಲಸ ಮಾಡಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಇದು ತೀವ್ರಗತಿಯಲ್ಲೇ ನಡೆಯುತ್ತಾ ಇದೆ. ತೀವ್ರಗತಿಯಲ್ಲೇ ಪ್ರಾರಂಭ ಆಗುತ್ತಾ ಇದೆ. ಈ ವರ್ಷ ಒಂದು ಕೋಟಿ 50 ಲಕ್ಷ ಹಣವನ್ನು ಇದಕ್ಕೆ ಒದಗಿಸಲಾಗಿದೆ.

ಎನ್.ಆರ್.ಡಬ್ಲ್ಯೂ. ಯೋಜನೆ

517 - ಶ್ರೀ ಪಿ. ಸಿ ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಎನ್.ಆರ್.ಡಬ್ಲ್ಯೂ. ಯೋಜನೆಯನ್ನು 1971ನೇ ಜನಗಣತಿಯ ಆಧಾರದ ಮೇಲೆ ಮಾಡಲಾದ ಸಂಗತಿ ನಿಜವೇ?*

ಆ) *ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಇ) *ಈಗ 1991-92ನೇ ಸಾಲಿನ ಜನಗಣತಿಯ ಆಧಾರದ ಮೇಲೆ ಯೋಜನೆ ಹಮ್ಮಿಕೊಳ್ಳುವ ವಿಚಾರ ಇದೆಯೇ?*

ಈ) *ಹಾಗಿದ್ದಲ್ಲಿ ಈ ಯೋಜನೆಯನ್ನು ತಯಾರಿಸುವಾಗ ಮುಂದಿನ 2000 ಇಸವಿಯನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗುವುದೇ?*

ಉ) *ಈ ಯೋಜನೆಯ ಉಸ್ತುವಾರಿಯನ್ನು ಜಿಲ್ಲಾ ಪರಿಷತ್ತುಗಳಿಗೆ ವಹಿಸಿಕೊಡುವ ಸಂಭವ ಇದೆಯೇ?*

ಊ) *ಧಾರವಾಡ ಜಿಲ್ಲೆಯಲ್ಲಿನ ವಿಸ್ತರಣೆಯಾದ ಪ್ರದೇಶಗಳಿಗೆ ಈ ಯೋಜನೆಯಡಿ ಮತ್ತೊಂದು ಟ್ಯಾಂಕ್ ಕಟ್ಟೆ ನೀರು ಸರಬರಾಜು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?*

ಋ) *ಹಾಗಿದ್ದಲ್ಲಿ, ಇದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ಮತ್ತು ಯೋಜನೆಯನ್ನು ಜಿಲ್ಲಾ ಪರಿಷತ್ತು ವಹಿಸಿಕೊಳ್ಳುವುದೇ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 1981ರ ಇಸವಿಯಂದು ಮೊದಲು ಕೈಗೊಂಡ ಯೋಜನೆಗಳನ್ನು 1971ರ ಜನಗಣತಿಯ ಆಧಾರದಮೇಲೆ ತಯಾರಿಸಲಾಗಿತ್ತು, ಆದರೆ ಈಗ ತಯಾರಿಸಲಾಗುವ ಯೋಜನೆಗಳನ್ನು 1981ನೇ ಇಸವಿ ಜನಗಣತಿಯನ್ನು ಆಧರಿಸಿ ತಯಾರಿಸಲಾಗುತ್ತಿದೆ. ಇನ್ನು ಮುಂದೆ 1991ನೇ ಇಸವಿ ಜನಗಣತಿಯ ವಿವರಗಳು ಪ್ರಕಟಣೆ ಆದ ಮೇಲೆ, ಆದರ ಆಧಾರದ ಮೇಲೆ ತಯಾರಿಸಲಾಗುವುದು.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹೌದು. ಮೇಲೆ ವಿವರಿಸಿದ ರೀತಿಯಲ್ಲಿ.